ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु - ५६००१८.

ವಿಷಯ : 2026-27ನೇ ಸಾಲಿಗೆ ನೂತನ ಸರ್ಟಿಫಿಕೇಟ್/ಡಿಪ್ಲೋಮಾ/ಪಿ.ಜಿ.ಡಿಪ್ಲೋಮಾ ತರಗತಿಗಳನ್ನು ಪ್ರಾರಂಭಿಸುವ ಬಗೆಗೆ

ಉಲ್ಲೇಖ : 1. ಮಾನ್ಯ ಕುಲಪತಿಗಳ ಅನುಮೋದನೆ, ಕಂಡಿಕೆ ಸಂಖ್ಯೆ:67 ದಿನಾಂಕ:19.02.2026
2. ಮಾನ್ಯ ಕುಲಪತಿಗಳ ಅನುಮೋದನೆ, ಕಂಡಿಕೆ ಸಂಖ್ಯೆ: 114 ದಿನಾಂಕ: 09.06.2026

ಕಸಂವಿ/ಸ.ಜಿ.ಪಿ.ಜಿ.ಡಿ/ಆಡಳಿತ/24-25/25-26/26-27 **ದಿನಾಂಕ: 09.06.2026**

ಮರು ಅಧಿಸೂಚನೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಮಾನ್ಯ ಕುಲಪತಿಗಳ ಅನುಮೋದನೆಯಂತೆ ವಿಶ್ವವಿದ್ಯಾಲಯದಲ್ಲಿ ಹಾಗೂ ಅಧೀನ ಸಂಸ್ಥೆಗಳಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಸರ್ಟಿಫಿಕೇಟ್, ಡಿಪ್ಲೋಮಾ, ಅಡ್ವಾನ್ಸ್ ಡಿಪ್ಲೋಮಾ ಮತ್ತು ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಿ ದಿನಾಂಕ: 02.04.2026 ರಿಂದ ಪ್ರವೇಶ ಪ್ರಕ್ರಿಯೆಯನ್ನು ಆರಂಭಿಸಿ, ದಿನಾಂಕ: 27.04.2026ರ ಪ್ರವೇಶ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸುವಂತೆ ಸೂಚಿಸಲಾಗಿತ್ತು ವಿಶ್ವವಿದ್ಯಾಲಯ ಹಾಗೂ ಅಧೀನ ಸಂಸ್ಥೆಗಳಲ್ಲಿ ಸದರಿ ಕೋರ್ಸ್‌ಗಳ ತರಗತಿಗಳನ್ನು ಏಕಕಾಲದಲ್ಲಿ ಪ್ರಾರಂಭಿಸಬಹುದಾದ್ದರಿಂದ 01.05.2026ರಂದು ತರಗತಿಗಳನ್ನು ಪ್ರಾರಂಭಿಸಲು ಸೂಚಿಸಲಾಗಿತ್ತು. ಈಗ ಮುಂದುವರೆದು ಮಾನ್ಯ ಕುಲಪತಿಗಳ ಅನುಮೋದನೆಯಂತೆ **ಪ್ರವೇಶಾತಿ ಪ್ರಕ್ರಿಯೆಯನ್ನು ದಿನಾಂಕ: 30.06.2026 ರವರೆಗೆ ವಿಸ್ತರಿಸಿ** ಆದೇಶಿಸಲಾಗಿದೆ. ಸದರಿ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ತರಗತಿಗಳನ್ನು ದಿನಾಂಕ : 01.07.2026ರಿಂದ ಪ್ರಾರಂಭಿಸಬಹುದಾಗಿದೆ.

ಕೋರ್ಸ್ ನಿಯಮಗಳು:

ಸರ್ಟಿಫಿಕೇಟ್ ಕೋರ್ಸ್ :

ಅರ್ಹತೆ : ಕನಿಷ್ಠ ಪಿ.ಯು.ಸಿ ಅಥವಾ ತತ್ಸಮಾನ ತರಗತಿಯಲ್ಲಿ ತೇರ್ಗಡೆ.

ಅವಧಿ – ಆರು ತಿಂಗಳು, **ಪತ್ರಿಕೆಗಳು** – 2

ಅಂಕಗಳ ವಿಂಗಡಣೆ – ಶೈಕ್ಷಣಿಕ ಕೋರ್ಸ್ ಗಳಿಗೆ ಲಿಖಿತ ಪರೀಕ್ಷೆಯನ್ನು ವಿಶ್ವವಿದ್ಯಾಲಯವು ನಡೆಸುತ್ತದೆ. ಪ್ರತಿ ಪತ್ರಿಕೆಗೆ 100 ಅಂಕಗಳು, ಇದರಲ್ಲಿ 80 ಅಂಕಗಳಿಗೆ ಲೇಖನ ಪರೀಕ್ಷೆ, 20 ಅಂಕಗಳಿಗೆ ಆಂತರಿಕ ಪರೀಕ್ಷೆಯನ್ನು ಆಯಾ ಸಂಸ್ಥೆಗಳು ನಡೆಸಿ ಅಂಕಗಳನ್ನು ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ಭರ್ತಿ ಮಾಡುವುದು. ಆಂತರಿಕ ಪರೀಕ್ಷೆಯನ್ನು 'ಕಂಠಪಾಠ, ಸೆಮಿನಾರ್, ಪರೀಕ್ಷೆ, ಮೌಖಿಕ ಪರೀಕ್ಷೆ, ಹಾಜರಾತಿ' ಮುಂತಾದ ರೀತಿಯಲ್ಲಿ ಕೈಗೊಳ್ಳಬಹುದು.

ವೃತ್ತಿಪರ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಹಿಂದೆ ನಿಗದಿಪಡಿಸಿದ ನಿಯಮಾನುಸಾರ 100 ಅಂಕಗಳಿಗೆ ಪರೀಕ್ಷೆ ನಡೆಸಲಾಗುವುದು.

ಡಿಪ್ಲೋಮಾ ಕೋರ್ಸ್ :

ಅರ್ಹತೆ : ಕನಿಷ್ಠ ಪಿ.ಯು.ಸಿ ಅಥವಾ ತತ್ಸಮಾನ ತರಗತಿಯಲ್ಲಿ ತೇರ್ಗಡೆ.

ಅವಧಿ –ಒಂದು ವರ್ಷ, **ಪತ್ರಿಕೆಗಳು** –5

ಪರೀಕ್ಷಾನಿಯಮಗಳನ್ನು ಪರೀಕ್ಷಾ ವಿಭಾಗದಲ್ಲಿ ವಿಚಾರಿಸುವುದು.

ಅಡ್ವಾನ್ಸ್ ಡಿಪ್ಲೋಮಾ ಕೋರ್ಸ್ :

ಅರ್ಹತೆ : ಬಿ.ಎ/ಎಂ.ಎ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣತೆ.

ಅವಧಿ –ಒಂದು ವರ್ಷ, **ಪತ್ರಿಕೆಗಳು** –5
ಪರೀಕ್ಷಾನಿಯಮಗಳನ್ನು ಪರೀಕ್ಷಾ ವಿಭಾಗದಲ್ಲಿ ವಿಚಾರಿಸುವುದು.

ಪಿ.ಜಿ. ಡಿಪ್ಲೋಮಾ ಕೋರ್ಸ್ :

ಅರ್ಹತೆ : ಬಿ.ಎ/ಎಂ.ಎ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣತೆ.

ಅವಧಿ –ಒಂದು ವರ್ಷ, **ಪತ್ರಿಕೆಗಳು** –5
ಪರೀಕ್ಷಾನಿಯಮಗಳನ್ನು ಪರೀಕ್ಷಾ ವಿಭಾಗದಲ್ಲಿ ವಿಚಾರಿಸುವುದು.

Link to Google form: https://forms.gle/cQ4NWRnvQpM39Lr89

ಆದೇಶದ ಮೇರೆಗೆ,

ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.

ಪ್ರತಿಗಳು :

1. ಮಾನ್ಯ ಕುಲಪತಿಗಳ ಆಪ್ತಶಾಖೆ.
2. ಕುಲಸಚಿವರ (ಆಡಳಿತ) ಆಪ್ತಶಾಖೆ.
3. ಮಾನ್ಯ ಕುಲಸಚಿವರು, ಪರೀಕ್ಷಾ ವಿಭಾಗ
4. ನಿರ್ದೇಶಕರು, ಸಂಶೋಧನೆ ಮತ್ತು ಸ್ನಾತಕೋತ್ತರ ನಿರ್ದೇಶನಾಲಯ
5. ವಿಶ್ವವಿದ್ಯಾಲಯದ ಎಲ್ಲ ನಿಕಾಯಾಧ್ಯಕ್ಷರು ಮತ್ತು ವಿಭಾಗಾಧ್ಯಕ್ಷರು
6. ನಿಗದಿತ ಕೋರ್ಸ್‌ಗಳ ಸಂಯೋಜಕರು.
7. ಸಂಬಂಧಿತ ಸಂಸ್ಥೆಗಳ ಕೋರ್ಸ್ ಸಂಯೋಜಕರು
8. ಕಚೇರಿ ಪ್ರತಿ